

ಡಾ.ವಿನೋದ ಛೆಬ್ಬಿ

ಜಗಳವು ತಾರಕಕ್ಕೆ ಏರಿದಾಗ ಸಂಬಂಧವನ್ನು ಬುಡಮೇಲು ಮಾಡುವಂಥ ವಿವರಗಳು ಹೊರಹೊಮ್ಮುತ್ತವೆ.

# 108: ಕೊಟ್ಟು ಖಾಲಿಯಾಗುವವರು

ಅಂಗದ ಅಮಲಾ ಅವರ ದಾಂಪತ್ಯ ಚಿಕಿತ್ಸೆ ನಡೆಯುತ್ತಿದೆ. ಅಂಗದನು ಲೈಂಗಿಕತೆಯಲ್ಲಿ ಸ್ವಚ್ಛಂದತೆಯನ್ನು ಬೆಳೆಸಿಕೊಳ್ಳಲು ಅಮಲಾ ಬಯಸಿದುದರ ಜೊತೆಗೆ ಅವನು ತನಗೆ ವಿಧೇಯನಾಗಿರಬೇಕೆಂದೂ, ಆದರೆ ತಾನು ಸ್ವತಃ ಬದಲಾಗಲು ಒಪ್ಪುತ್ತಿಲ್ಲವೆಂದೂ ಹೋದಸಲ ತಿಳಿದುಕೊಂಡೆವು.

ಅಮಲಾಳೊಡನೆ ಮಾತಾಡುವಾಗ ಅಂಗದನ ಕಡೆಗೆ ಆಗಾಗ ಕಣ್ಣು ಹಾಯಿಸುತ್ತಿದ್ದೆ. ಅವನೇನು ಮಾಡುತ್ತಿದ್ದ? ಮಾತು ಆಡುವವರ ಮುಖವನ್ನು ಟಕಮಕ ನೋಡುತ್ತಿದ್ದುದು ಹೊರನೋಟಕ್ಕೆ ಕಂಡರೂ ಒಳಗೊಳಗೆ ಏನನ್ನೋ ನುಂಗಿಕೊಳ್ಳುತ್ತಿದ್ದುದು, ಅದರಿಂದ ಅವನೊಳಗೆ ವಿಲಕ್ಷಣ ಬದಲಾವಣೆ ಆಗುತ್ತಿದ್ದುದು ಗೊತ್ತಾಗುತ್ತಿತ್ತು. ನೃತ್ಯಗಾರನ ಮೇಲೆ ಬಹುವರ್ಣಗಳ ಬೆಳಕನ್ನು ಚೆಲ್ಲುವಾಗ ಕಾಣುವಂತೆ ಅವನ ಚಹರೆಯಲ್ಲಿ ಒಂದು ಸಲ ವ್ಯಗ್ರತೆ, ಇನ್ನೊಂದು ಸಲ ಅಸಹಾಯಕತೆ, ಮತ್ತೊಂದು ಸಲ ಗೊಂದಲ ಹೀಗೆ ಹಲವು ಛಾಯೆಗಳು ತೋರಿ ಚೆಲ್ಲಾಟ ಆಡಿ ಮರೆಯಾಗುತ್ತಿದ್ದುವು. ನನ್ನ ಹಾಗೂ ಅಮಲಾಳ ಮಾತು ಮುಂದುವರಿದಂತೆ ಅವನೊಳಗೆ ಅಸಹನೆ ಗೂಡುಗಟ್ಟುವುದು ಎದ್ದುಕಾಣುತ್ತಿತ್ತು. ನಾವು ಮಾತು ನಿಲ್ಲಿಸಿದ ನಂತರ ಹರಡಿದ ಮೌನವನ್ನು ಗಡಚಿಕ್ಕುವಂತೆ ಒಡೆದ ಅವನು ಪ್ರಚೋದನೆ ಇಲ್ಲದೆ ಬಿಗಿಮಾತು ಆಡಿದ.

'ಈಗ ನನಗೆ ಅನ್ನಿಸುತ್ತಿದೆ ಗೊತ್ತಾ? (ನನ್ನತ್ತ ನೋಡುತ್ತ) ಹೌದು, ನಾನು ನಿಜವಾಗಿಯೂ ಪೊದೆಯಿಂದ ತಯಾರಾದ ಪ್ರಾಣಿಯಾಗಿದ್ದೇನೆ. ಪೊದೆಯೋ ಪ್ರಾಣಿಯೋ ಗೊತ್ತಾಗುತ್ತಿಲ್ಲ. ನಾನು ಯಾರು ಅಂತ ನನಗೇ ಪ್ರಶ್ನೆ ಹಾಕಿಕೊಳ್ಳುತ್ತಿದ್ದೀನಿ...' ಅವನೊಳಗೆ ಮಡುವುಗಟ್ಟಿದ್ದ ಮುನಿಸು ಒಳಗೇ ಸ್ಫೋಟವಾಯಿತು. ಅಮಲಾಳನ್ನು ಎದುರಿಸಿ ಏರುಸ್ವರದಿಂದ ಮಾತಾಡಿದ. 'ಅಮಲಾ, ನಮ್ಮಿಬ್ಬರ ನಡುವೆ ಸೆಕ್ಸ್ ನಡೀತಾನೇ ಇದೆ. ನೀನು ಬೇಕೆಂದಾಗಲೆಲ್ಲ ನಾನು ಯಾವೊತ್ತೂ ಇಲ್ಲವೆಂದಿಲ್ಲ. ಆದರೂ ನನ್ನ ಬಗ್ಗೆ ನೀನು ಕಂಪ್ಲೇಂಟೇ ಹೇಳುತ್ತಿದ್ದೀಯಾ ಹೊರತು, ಅಂಗದ್ ನಿನಗೆ ಹೇಗೆ ಅನ್ನಿಸಿತು ಎಂದು ಯಾವೊತ್ತಾದರೂ ಕೇಳಿದ್ದೀಯಾ? ಸೆಕ್ಸ್‌ನಲ್ಲಿ ನನ್ನ ಫೀಲಿಂಗ್ಸ್ ಹೇಗೆ ಎಂದು ವಿಚಾರಿಸಿದ್ದೀಯಾ? ನನಗೆ ತೃಪ್ತಿಯಾಗುತ್ತಿದೆಯಾ ಎಂದು ಕೇಳಿದ್ದೀಯಾ?' ಮಾತು ನಿಲ್ಲಿಸಿ ಅವಳನ್ನೇ ದಿಟ್ಟಿಸಿದ. 'ನಾವಿಲ್ಲಿ ಯಾಕೆ ಬಂದಿದ್ದೇವೆ? ಆ ಎನಸ್ಥೆಟಿಸ್ಟ್ ನಿನ್ನ ಮೇಲೆ ಕಣ್ಣುಹಾಕಿದ, ನಿನಗೆ ಅವನ ಮೇಲೆ ಆಕರ್ಷಣೆಯಾಯಿತು. ಅದಕ್ಕೆ ಟ್ರೀಟ್ಮೆಂಟ್ ನಾನು ತೆಗೆದುಕೊಳ್ಳಬೇಕು, ಬದಲಾವಣೆ ನಾನು ಆಗಬೇಕು!' ಅಕ್ಕಸದಿಂದ ಉದ್ಗರಿಸಿದ.

ಅಮಲಾ ಇಷ್ಟೊಂದು ಕಠಿಣವಾದ ದಾಳಿಯನ್ನು ನಿರೀಕ್ಷಿಸಿರಲಿಲ್ಲ. ಆಕೆಗೆ ಅಂಗದನ ಯಾವ ಪ್ರಶ್ನೆಯನ್ನು ಹೇಗೆ ಎದುರಿಸಬೇಕೆಂದು ತಿಳಿಯದೆ ದಿಗ್ಭ್ರಮೆಯಾಯಿತು. ಚತುರೆ ಒಂದು ಕ್ಷಣದಲ್ಲಿ ಸಾವರಿಸಿಕೊಂಡು ಗುರಾಣಿ ಹಿಡಿದಳು. 'ಯಾಕೆ ಹೀಗಂತೀಯ ಅಂಗದ್? ನಿನಗೆ ತೃಪ್ತಿಯಾಗಿ ನಿನ್ನ ಶರೀರದ ಆವೇಶ ತಣ್ಣಗಾದ ನಂತರವೇ ತಾನೇ ನೀನು ನನ್ನಿಂದ ಬೇರೆಯಾಗುವುದು? ಅಲ್ಲಿಯ ತನಕ ನನ್ನನ್ನು ಬಿಡುವುದೇ ಇಲ್ಲವಲ್ಲ?' ಆಗ ಅಂಗದ್ ಬಹುಶಃ ಮೊಟ್ಟಮೊದಲ ಸಲ ಅವಳನ್ನು ತಡೆಯುತ್ತ ಹೇಳಿದ. 'ಅದು ನನ್ನ ಶರೀರಕ್ಕಾಯಿತು. ನನ್ನ ಮನಸ್ಸು ತಣಿಯಿತಾ ಎಂದು ಯಾವೊತ್ತಾದರೂ ವಿಚಾರಿಸಿದ್ದೀಯಾ?'

'ನಿನ್ನದು ಮುಗಿದ ಮೇಲೆ ಆಕಡೆ ಮುಖ ತಿರುಗಿಸಿ ಮಲಗುತ್ತೀಯಾ. ನಾನು ಕೇಳುವುದು ಏನಿದೆ?' ಎಂದು ಅಮಲಾ ಸಮರ್ಥಿಸಿಕೊಂಡಳು. ಇಬ್ಬರ ಮಾತಿನಲ್ಲಿ ಬಿಸಿಯೇರಿತು. ಒಬ್ಬರನ್ನೊಬ್ಬರು ಆರೋಪಿಸುತ್ತ ತರ್ಕ ಹಳಿತಪ್ಪಿತು. ವಾಗ್ಯುದ್ಧ ನಿಕರಕ್ಕೇರುವುದನ್ನು, ಬಯ್ಗುಳ ವಿನಿಮಯ ಆಗುತ್ತಿರುವುದನ್ನು ಕುತೂಹಲದಿಂದ ಗಮನಿಸುತ್ತಿದ್ದೆನೇ ಹೊರತು ಜಗಳವನ್ನು ನಿಲ್ಲಿಸಲಿಕ್ಕಾಗಲೀ, ಮಧ್ಯಪ್ರವೇಶ ಮಾಡಿ ಪ್ರಶ್ನೆ ಕೇಳಲಿಕ್ಕಾಗಲೀ, ಒಬ್ಬರಿಗೆ ಇನ್ನೊಬ್ಬರನ್ನು ಅರ್ಥಮಾಡಿಸಲಿಕ್ಕಾಗಲೀ ಹೋಗಲಿಲ್ಲ. ಯಾಕೆ? ಇಲ್ಲಿ ದಂಪತಿಯ ಜಗಳದ ಬಗೆಗೆ ಒಂದು ಮಾತು ಹೇಳಲೇಬೇಕು.

ನಾನು ಆಪ್ತಸಲಹೆಗಾರರಿಗೆ ನಡೆಸುವ ದಾಂಪತ್ಯ ಚಿಕಿತ್ಸೆಯ ತರಬೇತಿಯ ಕಾರ್ಯಾಗಾರಗಳಲ್ಲಿ ಗಂಡಹೆಂಡಿರ ಜಗಳದ ಮಾದರಿಯನ್ನು ಪ್ರಸ್ತುತಪಡಿಸಿ ಬಗೆಹರಿಸಲು ಆಹ್ವಾನಿಸಿದಾಗ, ಹೆಚ್ಚಿನವರು ಜಗಳವನ್ನು ನಿಲ್ಲಿಸಲು ಧಾವಿಸುವುದನ್ನು ಕಂಡಿದ್ದೇನೆ. ಯಾಕೆಂದು ವಿಚಾರಿಸಿದಾಗ ಅವರ ವಿವರ: 'ಗಂಡಹೆಂಡತಿ ಜಗಳವನ್ನು ನಿಲ್ಲಿಸಲು ನಮ್ಮ ಸಹಾಯ ಕೋರಿ ಬಂದಿರುವಾಗ ಅದನ್ನು ನಿಲ್ಲಿಸುವುದು ನಮ್ಮ ಕರ್ತವ್ಯ ಅಲ್ಲವೆ?' ಈಗ ನಿಲ್ಲಿಸಿದರೂ ಮನೆಗೆ ಹೋಗಿ ಜಗಳ ಮುಂದುವರಿಸಿದರೆ ಹೇಗೆ ನಿಲ್ಲಿಸುತ್ತೀರಿ ಎಂಬ ಮರುಪ್ರಶ್ನೆಗೆ ಉತ್ತರ ದೊರೆತಿಲ್ಲ. ಹಾಗೆಯೇ, ಜಗಳ ನಿಲ್ಲಿಸಬೇಕೆನ್ನುವ ದಂಪತಿಯು ಜಗಳದಲ್ಲಿ ತೊಡಗುವುದು 'ಶಾಂತಿಗಾಗಿ ಯುದ್ಧ' ಎನ್ನುವಂತೆ ಅವರ ಉದ್ದೇಶಕ್ಕೇ ವ್ಯತಿರಿಕ್ತ ಅಲ್ಲವೆ ಎನ್ನುವುದಕ್ಕೂ ಉತ್ತರವಿಲ್ಲ. ಹಾಗಾದರೆ, ಗಂಡಹೆಂಡಿರು ಜಗಳವಾಡುವ ನಿಜವಾದ ಉದ್ದೇಶವಾದರೂ ಏನು? ಸಂಗಾತಿಯ ಬಗೆಗೆ ತನ್ನ ಭಿನ್ನಾಭಿಪ್ರಾಯವನ್ನು ತಿಳಿಸುತ್ತ, ನನ್ನನ್ನು ಅರ್ಥಮಾಡಿಕೋ ಎಂದು ಗಟ್ಟಿಯಾಗಿ ಹೇಳುವ ಸಂವಹನ ಕ್ರಿಯೆಯಿದು. ಹಾಗಾಗಿ ಜಗಳವನ್ನು ನಿಲ್ಲಿಸಲು ಹೋಗದೆ ಅದನ್ನು ಅರ್ಥಮಾಡಿಕೊಳ್ಳುವುದು ಸೂಕ್ತ.

ಅಷ್ಟಲ್ಲದೆ, ಜಗಳದಲ್ಲಿ ಇನ್ನೊಂದು ಪ್ರಯೋಜನವನ್ನೂ ಕಂಡಿದ್ದೇನೆ. ಜಗಳವು ತಾರಕಕ್ಕೆ ಏರಿದಾಗ ಒಂದು ತಿರುವು ಪಡೆದುಕೊಳ್ಳುತ್ತದಲ್ಲವೆ? ಆಗ ಸಂಬಂಧವನ್ನು ಬುಡಮೇಲು ಮಾಡುವಂಥ ವಿವರಗಳು ಹೊರಹೊಮ್ಮುತ್ತವೆ. ಅಂಗದ ಸ್ವಭಾವತಃ ವಿರಸದಿಂದ ದೂರ ಇರುವವನು ಈಗ ಬಾಯಿಬಿಡುತ್ತಿದ್ದಾನೆ. ಸಂವಾದ ತಿರುವು ಪಡೆದುಕೊಳ್ಳುತ್ತಿದೆ. ಇನ್ನೇನು ಮಹತ್ವದ್ದು ಬರುತ್ತಿದೆ ಎಂದು ಕಾಯುತ್ತಿರುವಾಗ ಬಂದೇಬಿಟ್ಟಿತು. ಮಾತು ಒಂದು ಸುತ್ತು ಸುತ್ತಿ ಅದೇ ಜಾಗಕ್ಕೆ ಬಂದಾಗ ಅಮಲಾ ಅಂಗದನಿಗೆ, 'ನನ್ನಿಂದ ನಿನಗೆ ಸುಖ ಪಡೆದಾದ ನಂತರ ಆಕಡೆ ತಿರುಗಿ ಮಲಗುತ್ತೀಯಾ. ನನ್ನನ್ನು ಕೇರ್ ಮಾಡೋದಿಲ್ಲ!' ಎಂದು ಆರೋಪಿಸಿದಾಗ ಅಷ್ಟೇ ಆವೇಶದಿಂದ ಅಂಗದ ಹೇಳಿದ: 'ನಿನಗೆ ಸುಖ ಕೊಟ್ಟಾದ ನಂತರ ನಾನು ಮುಖ ತಿರುಗಿಸಿ ಮಲಗುವುದು ಯಾಕೆ ಗೊತ್ತೆ? ನಾನೊಬ್ಬನೇ ಸುಖಪಡಲಿಕ್ಕೆ! ಅರ್ಥವಾಯಿತಾ?'

ಇಲ್ಲೇನು ನಡೆಯುತ್ತಿದೆ? ಅಂಗದನ ಕಾಮಸುಖಕ್ಕೆ ತಾನೇ ಕಾರಣ, ಹಾಗೂ ತನ್ನಿಂದ ಸುಖಪಟ್ಟವನು ಕೃತಜ್ಞತೆ ತೋರಿಸದೆ ವಿಮುಖನಾಗುತ್ತಿದ್ದಾನೆ ಎಂದು ಅಮಲಾ ತಿಳಿದರೆ, ಅವಳಿಗೆ ಸುಖಕೊಟ್ಟು ತಾನು ಸುಖಪಡಲು ಸಾಧ್ಯವಾಗದೆ ನಿರಾಸೆಯಿಂದ ಒಂಟಿಯಾಗಿ ಅಂಗದ ವಿಮುಖನಾಗುತ್ತಿದ್ದಾನೆ. ಅವನು ವಿಮುಖನಾಗುವುದು ಅಮಲಾಳಿಗೆ ಭಾವನಾತ್ಮಕವಾಗಿ ತನ್ನಿಂದ ದೂರವಾಗುವ ವಿಚಾರವಾದರೆ, ಅಂಗದನಿಗೆ, (ಈಗಲಾದರೂ) ತನ್ನನ್ನು ತನ್ನೊಂದಿಗೆ ಇರಗೊಡಿಸುವಂಥ ಹವಣಿಕೆ ಆಗಿದೆ. ಇನ್ನೊಂದು ರೀತಿ ಹೇಳಬೇಕೆಂದರೆ, ಅಂಗದನಿಗೆ ಅಮಲಾಳ ಇಷ್ಟದ ಪ್ರಕಾರ ಕಾಮಕ್ರೀಡೆಯಲ್ಲಿ ಪಾಲುಗೊಳ್ಳುವುದು ತನ್ನನ್ನು ತಾನು ಕಳೆದುಕೊಂಡಂತೆ. ಹಾಗಾಗಿ, ಅವಳಿಂದ ದೂರವಾಗಿ ತನ್ನ ಸ್ವಂತಿಕೆಯನ್ನು ಕಾಪಾಡಿಕೊಳ್ಳುತ್ತಿದ್ದಾನೆ! ನನಗೆ, 'ತುಮ್ಸೆ ಪಾಕೆ ಹಮ್ ಖುದ್‌ಸೆ ದೂರ್ ಹೋಗಯೇ ಥೇ, ತುಮ್ಹೇ ಛೋಡಕರ್ ಅಪನೆ ಪಾಸಾಗಯೇ ಹೈಂ' ಎಂಬ ಮುಕೇಶ್ ಅವರ ಹಳೆಯ ಹಿಂದೀ ಹಾಡು ನೆನಪಾಯಿತು.

ದಿಗ್ಭ್ರಮೆಗೊಂಡ ಅಮಲಾ, ದಿಟ್ಟತನದಿಂದ ಅಂಗದ್– ಒಬ್ಬರನ್ನೊಬ್ಬರು ಮೌನದಿಂದ ಇರಿಯುತ್ತಿರುವಾಗ ನಾನು ಅಂಗದ್ ಎಷ್ಟೊಂದು ಒಂಟಿಯಾಗಿದ್ದಾನಲ್ಲ, ಅವನಿಗೇಕೆ – ಅಮಲಾಳಿಗೆ ಆದಂತೆ – ಇನ್ನೊಂದು ಹೆಣ್ಣಿನ ಮೇಲೆ ಯಾಕೆ ಮನಸ್ಸಾಗಿಲ್ಲ ಎಂದು ವಿಸ್ಮಯಗೊಳ್ಳುತ್ತಿದ್ದೆ.

ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: 8050255229 (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: 8494944888 (ಬೆಳಿಗ್ಗೆ 11ರಿಂದ ಸಂಜೆ 5ರ ತನಕ) ಲೇಖಕರ ವಿಳಾಸ: www.medisex.org